**ದಿ:17.10.2022 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಶ್ರೀ ಜಿ ಆರ್ ಆರ್ ವಕೀಲರಿಂದ:** ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ.

ನನಗೆ ವಾದಿ ಗೊತ್ತು. ನಿಪಿ 2 ಪಾರ್ವತಿ ಸೋಮಯ್ಯರವರು ಮಾಡಿರುವಂತಹ ನೊಂದಾಯಿತ ವೀಲುನಾಮೆ ಆಗಿರುತ್ತದೆ. ಸದರಿ ವೀಲುನಾಮೆಯನ್ನು ನಾನೇ ತಯಾರಿಸಿರುತ್ತೇನೆ. ನಿಪಿ 2 ವೀಲುನಾಮೆಗೆ ಪಾರ್ವತಿ ಸೋಮಯ್ಯರವರು ನನ್ನ ಎದುರಿನಲ್ಲಿಯೆ ಸಹಿ ಮಾಡಿರುತ್ತಾರೆ, ಸದರಿ ಪಾರ್ವತಿ ಸೋಮಯ್ಯರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿಯವರ ಸಹಿಯನ್ನು ಈಗಾಗಲೆ ನಿಪಿ 2(ಎ) ಯಿಂದ ನಿಪಿ 2(ಐ) ಎಂದು ಗುರುತಿಸಲಾಗಿದೆ. ನಿಪಿ 2 ವೀಲುನಾಮೆಗೆ ಸಾಕ್ಷಿದಾರರಾಗಿ ರಾಮು ಮತ್ತು ರೋಷನ್ ಎಂಬುವವರು ಸಹಿಯನ್ನು ಮಾಡಿರುತ್ತಾರೆ. ಸದರಿ ರಾಮ ಎಂಬುವವರ ಸಹಿಯನ್ನು ಈಗಾಗಲೆ ನಿಪಿ 2(ಜೆ) ಎಂದು ಗುರುತಿಸಲಾಗಿದೆ. ನಂತರದಲ್ಲಿ ನಾನು ನಿಪಿ 2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ 2 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ, ಒಪ್ಪಿದ ಮೇರೆಗೆ ನಿಪಿ 2(ಒ) ಎಂದು ಗುರುತಿಸಲಾಯಿತು. ನಂತರದಲ್ಲಿ ನಿಪಿ 2 ವೀಲುನಾಮೆಯನ್ನು ನೊಂದಾವಣಿ ಮಾಡಿಸಲಾಗಿರುತ್ತದೆ. ನಿಪಿ 2 ನೊಂದಾವಣೆಯಾಗುವ ಸಮಯದಲ್ಲಿ ನಾನು ಹಾಜರಿದ್ದೆನು. ನಿಪಿ 2 ರ 1 ನೇ ಪುಟದ ಹಿಂಭಾಗದಲ್ಲಿರುವ ಪಾರ್ವತಿ ಸೋಮಯ್ಯರವರ ಸಹಿಯನ್ನು ಸಾಕ್ಷಿಯು ನೋಡಿ, ಗುರುತಿಸಿದ್ದು, ಸದರಿಯವರ ಸಹಿಯನ್ನು ಈಗಾಗಲೆ ನಿಪಿ 2 (ಕೆ) ಯಿಂದ (ಎಂ) ಎಂದು ಗುರುತಿಸಲಾಗಿದೆ.

**ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.